ದಿನಾಂಕ 28.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಕೆ.ಎಸ್ ರವರಿಂದಃ-

ನಾನು ಸರ್ವೆ ನಂ. 54/1 ಮತ್ತು 54/12ಪಿ2 ರ ಸ್ವತ್ತುಗಳನ್ನು ಒತ್ತುವರಿ ಮಾಡಿಕೊಳ್ಳದೇ ಇರುವುದರಿಂದ ಅವುಗಳ ಸ್ವಾಧೀನವನ್ನು ಪ್ರತಿವಾದಿ 1 ರಿಂದ 5 ರವರುಗಳಿಗೆ ಬಿಟ್ಟುಕೊಟ್ಟಿರುವುದಿಲ್ಲ. ಸರ್ವೆ ನಂ. 54/1 ಮತ್ತು 54/12ಪಿ2 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪ್ರತಿವಾದಿ 1 ರಿಂದ 5 ರವರುಗಳು ನನಗೆ ಯಾವುದೇ ಕ್ರಯಪತ್ರವನ್ನು ಬರೆದುಕೊಟ್ಟಿರುವುದಿಲ್ಲ. 1ನೇ ಪ್ರತಿವಾದಿಯು ವಕೀಲರಾದ ಕೆ.ಎನ್ ವಿಶ್ವನಾಥರವರ ಮೂಲಕ ನನಗೆ ನೋಟೀಸನ್ನು ನೀಡಿದ್ದರು. ನನ್ನ ಮತ್ತು 1ನೇ ಪ್ರತಿವಾದಿಯ ನಡುವೆ ಮಾತುಕತೆಯು ಸದರಿ ವಕೀಲರ ಕಛೇರಿಯಲ್ಲಿ ಆಗಿರುತ್ತದೆ. ಆ ಸಂದರ್ಭದಲ್ಲಿ ನಮ್ಮಿಬ್ಬರ ನಡುವೆ ಒಂದು ಕರಾರು ಪತ್ರವಾಗಿರುತ್ತದೆ. ಸದರಿ ಕರಾರು ಪತ್ರಕ್ಕೆ 1ನೇ ಪ್ರತಿವಾದಿಯು ಸಹಿ ಮಾಡಿರುವುದಿಲ್ಲ. ನಾನು ಮೇಲೆ ತಿಳಿಸಿದಂತೆ ನಮ್ಮಿಬ್ಬರ ನಡುವೆ ಯಾವುದೇ ಕರಾರು ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಸರ್ವೆ ನಂ. 54/1 ಮತ್ತು 54/12ಪಿ2 ರ ಸ್ವತ್ತುಗಳಲ್ಲಿ 2000ನೇ ಇಸವಿಯಿಂದ ಇಲ್ಲಿಯವರೆ ಅನಧಿಕೃತವಾಗಿ ಸ್ವಾಧೀನದಲ್ಲಿದ್ದು, ಸದರಿ ಆಸ್ತಿಗಳಲ್ಲಿ ಬಂದಂತಹ ಲಾಭದ ಹಣದ ಪೈಕಿ ರೂ. 2 ಲಕ್ಷ ಹಣವನ್ನು 1ನೇ ಪ್ರತಿವಾದಿಗೆ ಬ್ಯಾಂಕ್ ಖಾತೆಯ ಮೂಲಕ ವರ್ಗಾಯಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು 1ನೇ ಪ್ರತಿವಾದಿಯ ನಡುವೆ ಯಾವುದೇ ಕರಾರು

ಪತ್ರವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯದ ಕರಾರು ಪತ್ರದಡಿಯಲ್ಲಿ 1ನೇ ಪ್ರತಿವಾದಿ ಮತ್ತು ಅವರ ತಾಯಿಯ ವಿರುದ್ದ ಯಾವುದೇ ದಾವೆಯನ್ನು ಇಲ್ಲಿಯವರೆಗೆ ದಾಖಲಿಸಿರುವುದಿಲ್ಲ ಎಂದರೆ ಸರಿ.

ಖಾಲಿ ಓಚರ್ ಗಳು ನಮ್ಮ ಮನೆಯಲ್ಲಿ ಇದ್ದವು. ಆ ರೀತಿ ನಮ್ಮ ಮನೆಯಲ್ಲಿ ಇದ್ದ ನಿ.ಪಿ-1 ಮತ್ತು 2 ದಾಖಲೆಗಳಿಗೆ 1ನೇ ಪ್ರತಿವಾದಿಗೆ ಹಣ ನೀಡಿದ ಸಂದರ್ಭದಲ್ಲಿ ಅವರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ನಿ.ಪಿ-1 ಮತ್ತು 2 ರ ಒಕ್ಕಣೆಗಳನ್ನು ನನ್ನ ತಮ್ಮ ಬರೆದಿರುತ್ತಾರೆ. ನಿ.ಪಿ-1 ಮತ್ತು 2 ರಲ್ಲಿ ಇಸವಿಯನ್ನು ಸರಿಯಾಗಿ ನಮೂದಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು 2000 ನೇ ಇಸವಿಯಲ್ಲಿ ಹಣ ನೀಡಿರುವುದಾಗಿ ತಿಳಿಸಿರುತ್ತಾರೆ. ನಿ.ಪಿ-1 ಮತ್ತು 2 ದಾಖಲೆಗಳನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿ.ಪಿ-3 ದಾಖಲೆಯನ್ನು 1ನೇ ಪ್ರತಿವಾದಿಯು ಬೆರಳಚ್ಚು ಮಾಡಿಸಿಕೊಂಡು ತಂದಿದ್ದರು. ನಿ.ಪಿ-1 ರಿಂದ 5 ದಾಖಲೆಗಳನ್ನು ನಾನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ, ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಾನು ರೂ.2 ಲಕ್ಷ ಹಣವನ್ನು ಕ್ರಯದ ಕರಾರಿನ ಪ್ರತಿಫಲದ ಹಣದ ರೂಪದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ರಿಂದ 5ನೇ ಪ್ರತಿವಾದಿಗಳಿಗೆ ರೂ. 20,95,000/- ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು 6ನೇ ಪ್ರತಿವಾದಿಯಿಂದ ಆಸ್ತಿಯನ್ನು ಖರೀದಿಸಿದ ಬಳಿಕ, ಈ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಕ್ರಯಪತ್ರವಾಗುವ ಸಂದರ್ಭದಲ್ಲಿ 6ನೇ ಪ್ರತಿವಾದಿಯು ನನಗೆ ಪರಿಚಯವಾಗಿರುತ್ತಾರೆ. ಪ್ರತಿವಾದಿ 1 ರಿಂದ 5 ರವರು 6ನೇ ಪ್ರತಿವಾದಿಗೆ ಸರ್ವೆ ನಂ.54/1 ರ ಸ್ವತ್ತನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಸದರಿ ಸ್ವತ್ತಿನ ಸ್ವಾಧೀನವು ನನ್ನ ಬಳಿ ಇತ್ತು ಎಂದರೆ ಸರಿ. ನಾನು 6ನೇ ಪ್ರತಿವಾದಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ. ನಾನು ದಾವೆಯಲ್ಲಿ ಕೋರಿರುವಂತಹ ಹಣವನ್ನು ನನಗೆ ನೀಡಲು 1 ರಿಂದ 5 ನೇ ಪ್ರತಿವಾದಿಗಳು ಭಾಧ್ಯಸ್ತರಲ್ಲ ಎಂದರೆ ಸರಿಯಲ್ಲ. ನಾನು ಕಾಲಮಿತಿ ಮೀರಿದ ಪರಿಹಾರವನ್ನು ಕೋರುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 18.01.2001 ರ ಕರಾರುಪತ್ರದ ಪ್ರಕಾರ ಹಣವನ್ನು ನೀಡುವಂತೆ 1 ನೇ ಪ್ರತಿವಾದಿಯು ದಿನಾಂಕ 10.08.2001 ರಂದು ನನಗೆ ಪತ್ರ ನೀಡಿದ್ದರು ಎಂದರೆ ಸರಿ. ಸದರಿ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-5 ಎಂದು ಗುರುತಿಸಲಾಯಿತು. ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್. ೩೫/೨೦೨೩

ಪಿಡಬ್ಲ್ಯೂ -1